1996-97 ನೇ ಸಾಲಿನಲ್ಲಿ 284 ದೋಣಿಗೆ ರೂ. 6.730 ಲಕ್ಷಗಳು

1997-98ರಲ್ಲಿ ಈವರೆಗೆ: 160 ದೋಣಿಗೆ ರೂ. 4.477 ಲಕ್ಷಗಳು ಸಹಾಯ ಧನ ನೀಡಿದೆ

ಆ) 1997-98ರ ಸಾಲಿಗೆ 7.70 ಲಕ್ಷ ರೂ. ಗಳ ಅನುದಾನವು ಲಭ್ಯವಿದ್ದು, ಸಹಾಯ ಧನಕ್ಕಾಗಿ ಬೇಡಿಕೆಗಳು ಬಂದಲ್ಲಿ ಪರಿಶೀಲಿಸಿ ಹಣವನ್ನು ನೀಡಲಾಗುವುದು.

ಮಂಗಳೂರು ಕ್ಷೇತ್ರದಲ್ಲಿ ಎಲ್. ಓ.ಸಿ. ಆದ ಬಿಲ್ಲುಗಳ ಬಾಕಿ

240 (279) ಶ್ರೀ ಎನ್. ಯೋಗೇಶ್ ಭಟ್ (ಮಂಗಳೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕರ್ನಾಟಕ ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯಿಂದ ಎಷ್ಟು ಎಲ್. ಓ.ಸಿ. (ಲೆಟರ್ ಆಫ್ ಕ್ರೆಡಿಟ್) ಆದ ಬಿಲ್‌ಗಳು ಬಾಕಿ ಇವೆ;

ಆ) ಮಂಗಳೂರು ಕ್ಷೇತ್ರಕ್ಕೆ ಸೇರಿದ್ದು ಎಷ್ಟು ಹಾಗೂ ಇದರ ಒಟ್ಟು ಮೊತ್ತ ಎಷ್ಟು;

ಇ) ಇದರಿಂದ ಕಾಮಗಾರಿಗಳು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಈ) ಡಾಂಬರು ಖರೀದಿಸಲು ಹಣ ಬಿಡುಗಡೆಯಾಗಿರುವುದು ನಿಜವೆ; ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು? (ವಿವರ ನೀಡುವುದು)

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು):

ಅ) 8324.00 ಲಕ್ಷ ರೂ. ಗಳನ್ನು ಫೆಬ್ರವರಿ 1998ರ ಅಂತ್ಯಕ್ಕೆ ಬಾಕಿ ಇದೆ.

ಆ) ಮಂಗಳೂರು ಕ್ಷೇತ್ರದಲ್ಲಿ 55.93 ಲಕ್ಷ ರೂ. ಗಳ ಬಿಲ್ಲುಗಳ ಬಾಕಿ ಇದೆ. ಮಂಗಳೂರು ಲೋಕೋಪಯೋಗಿ ಇಲಾಖೆ ವಿಭಾಗದಲ್ಲಿ ಫೆಬ್ರವರಿ 1998ರ ಅಂತ್ಯದವರೆಗೆ 697.88 ಲಕ್ಷ ರೂ. ಗಳ ಬಿಲ್ಲುಗಳ ಬಾಕಿ ಇದೆ. ಮಂಗಳೂರು ಲೋಕೋಪಯೋಗಿ ವಿಭಾಗಕ್ಕೆ ಫೆಬ್ರವರಿ 98ರ ಅಂತ್ಯಕ್ಕೆ ಕಾಮಗಾರಿಗಳಿಗಾಗಿ 687.94 ಲಕ್ಷ ರೂ. ಗಳು ಪಾವತಿ ಮಾಡಿದೆ.

ಇ) ಬಂದಿದೆ

ಈ) ನಿಜವಲ್ಲ. 20.50 ಕೋಟಿ ರೂ. ಗಳು ಬಿಡುಗಡೆಯಾಗಿದೆ.

ಕರಾವಳಿ ಪ್ರದೇಶಗಳಲ್ಲಿರುವ ಯಾಂತ್ರಿಕ ಮೀನುಗಾರಿಕೆ

241 (511) ಶ್ರೀ ಎಸ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕರ್ನಾಟಕ ರಾಜ್ಯದ ಕರಾವಳಿ ಪ್ರದೇಶಗಳಲ್ಲಿರುವ ಯಾಂತ್ರಿಕ ಮೀನುಗಾರಿಕೆ ಮಾಡುವ ಜನರು ತೀವ್ರ ಸಂಕಷ್ಟದಲ್ಲಿ ಇರುವುದರಿಂದ ಪ್ರತಿ ಲೀಟರ್ ಡಿಸೆಲ್‌ಗೆ ರಾಜ್ಯ ಮಾರಾಟ ತೆರಿಗೆ (ಸೇಲ್ಸ್ ಟ್ಯಾಕ್ಸ್) ವಿನಾಯತಿ ಕೊಡಲು ಸರ್ಕಾರದವರು ಪರಿಶೀಲಿಸುವರೆ;